**All India Radio: Bangalore**
**National Bulletin In Kannada**
**22.10.2025  19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**22.10.2025  19.35 p.m.**
**<><><><>**

ಮುಖ್ಯಾಂಶಗಳು

1. ಭಾರತದ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಕಳೆದ ದಶಕದಲ್ಲಿ ೫ ಪಟ್ಟು ಹೆಚ್ಚಳ
2. ಬಿಹಾರ ಚುನಾವಣೆ ಮೊದಲ ಹಂತದ ಮತದಾನಕ್ಕೆ ನಾಮಪತ್ರ ಹಿಂಪಡೆಯಲು ನಾಳೆ ಕೊನೆಯ ದಿನ
3. ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ನಾಳೆಯಿಂದ ಜರ್ಮನಿ ಪ್ರವಾಸ, ಬರ್ಲಿನ್ ಜಾಗತಿಕ ಸಂವಾದ ಕಾರ್ಯಕ್ರಮದಲ್ಲಿ ಭಾಗಿ
4. ಉತ್ತರಾಖಂಡದ ಗಂಗೋತ್ರಿ ಧಾಮದ ಪ್ರವೇಶಕ್ಕೆ ಇಂದು ತೆರೆ ; ಚಳಿಗಾಲದಲ್ಲಿ ಮುಖ್ಬಾ ಗ್ರಾಮದಲ್ಲಿ ದರ್ಶನಕ್ಕೆ ಅವಕಾಶ
5. ಮಹಿಳಾ ವಿಶ್ವಕಪ್ ಕ್ರಿಕೆಟ್ ; ಆಸ್ಟ್ರೇಲಿಯಾಗೆ ೨೪೫ ರನ್ ಗುರಿ ನೀಡಿದ ಇಂಗ್ಲೆಂಡ್

<><><><>

ಭಾರತದ ನವೀಕರಿಸಬಹುದಾದ ಇಂಧನ ಸಾಮರ್ಥ್ಯ ೨೦೧೪ರಲ್ಲಿ ೩೫ ಗಿಗಾವ್ಯಾಟ್‌ಗಳಿಷ್ಟಿದ್ದು, ಈಗ ೫ ಪಟ್ಟು ಹೆಚ್ಚಾಗಿ ೧೯೭ ಗಿಗಾವ್ಯಾಟ್‌ಗೆ ಏರಿಕೆಯಾಗಿದ್ದು, ಗಣನೀಯ ಪ್ರಗತಿ ಸಾಧಿಸಿದೆ. ಬೃಹತ್ ಜಲವಿದ್ಯುದಾಗರಗಳಿಂದ ಉತ್ಪಾದಿಸಲಾದ ಇಂಧನ ಇದರಡಿ ಸೇರಿಲ್ಲ. ೨೦೩೦ ರ ವೇಳೆಗೆ ಪಳೆಯುಳಿಕೆ ರಹಿತ ಇಂಧನ ಸಾಮರ್ಥ್ಯವನ್ನು ೫೦೦ ಗಿಗಾವ್ಯಾಟ್‌ಗಳಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ. ಈ ವಲಯದಲ್ಲಿ ದೇಶವು ಅಭೂತಪೂರ್ವ ವಿಸ್ತರಣೆಯನ್ನು ಕ್ಷಿಪ್ರವಾಗಿ ಹೊಂದುತ್ತಿದ್ದು, ಈ ವರ್ಷ ಕೇಂದ್ರ ನವೀಕರಿಸಬಹುದಾದ ಇಂಧನ ಅನುಷ್ಠಾನ ಏಜೆನ್ಸಿಗಳು ೫.೬ ಗಿಗಾವ್ಯಾಟ್‌ಗಳಿಗೆ ಬಿಡ್ ಮಾಡಿದ್ದು, ರಾಜ್ಯ ಸಂಸ್ಥೆಗಳು ೩.೫ ಮೆಗಾವ್ಯಾಟ್‌ಗಳಿಗೆ ಬಿಡ್ ಮಾಡಿದೆ ಎಂದು ಸಚಿವಾಲಯ ಅಂಕಿ-ಅಂಶ ನೀಡಿದೆ. ಭಾರತದ ನವೀಕರಿಸಬಹುದಾದ ಇಂಧನ ಬೆಳವಣಿಗೆಯ ಮುಂದಿನ ಹಂತವು ಹೈಬ್ರಿಡ್ ಮತ್ತು ಆರ್‌ಟಿಸಿ ಯೋಜನೆಗಳು, ಕಡಲಾಚೆಯ ಪವನ ಶಕ್ತಿ ಉತ್ಪಾದನೆ ಮತ್ತು ಸಂಗ್ರಹದ ಮೂಲಕ ರೂಪು ತಳೆಯಲಿದೆ. ಇದು 'ಪಿಎಂ ಕುಸುಮ್' ಮತ್ತು 'ಪಿಎಂಎಸ್‌ಜಿವೈ'(ಸೌರಶಕ್ತಿ), ಹಸಿರು ಹೈಡ್ರೋಜನ್ ಮತ್ತು ಹಸಿರು ಇಂಧನ ಕಾರಿಡಾರ್‌ಗಳ ಮೂಲಕ ವಿತರಣೆಯಾಗಲಿದೆ ಎಂದು ಸಚಿವಾಲಯ ಹೇಳಿದೆ.

<><><><>

ಬಿಹಾರ ಚುನಾವಣೆಯ ಮೊದಲ ಹಂತದ ಮತದಾನ ನವೆಂಬರ್ ೬ ರಂದು ನಿಗದಿಯಾಗಿದ್ದು, ಪ್ರಚಾರ ಕಾರ್ಯ ಭರದಿಂದ ಸಾಗಿದೆ. ನಾಮಪತ್ರಗಳನ್ನು ಹಿಂಪಡೆಯಲು ನಾಳೆ ಕೊನೆಯ ದಿನವಾಗಿದೆ. ಈ ಮಧ್ಯೆ ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ಬಗೆಬಗೆ ಕಸರತ್ತು ನಡೆಸಿವೆ. ವಿವಿಧ ರಾಜಕೀಯ ಪಕ್ಷಗಳ ನೇತಾರರು ಇಂದು ಚುನಾವಣಾ ರ್‍ಯಾಲಿ ನಡೆಸಿದರು. ಜೆಡಿಯು ರಾಷ್ಟ್ರೀಯಾಧ್ಯಕ್ಷ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿವಿಧೆಡೆ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು. ಲೋಕಜನಶಕ್ತಿ ಪಕ್ಷದ ಅಧ್ಯಕ್ಷ ಚಿರಾಗ್ ಪಾಸ್ವಾನ್ ಖಗಾರಿಯಾದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. ರಾಷ್ಟ್ರೀಯ ಜನತಾದಳ ಆರ್.ಜೆ.ಡಿ. ನಾಯಕ

ತೇಜಸ್ವಿ ಪ್ರಸಾದ್ ಯಾದವ್, ತಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ, ಎಲ್ಲಾ ಜೀವಿಕಾ ದೀದಿಯರಿಗೆ ಸರ್ಕಾರಿ ನೌಕರಿ ನೀಡುವುದಾಗಿ ಭರವಸೆ ನೀಡಿದರು. ಈ ಮಧ್ಯೆ ಬಿಜೆಪಿ ಈ ಭರವಸೆಯನ್ನು ಟೀಕಿಸಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರಿಂದಾಗಿ ಜೀವಿಕಾ ದೀದಿಯರಿಗೆ ಜೀವನದಲ್ಲಿ ಸಂತೋಷ ದೊರೆತಿದೆ ಎಂದು ಹೇಳಿದೆ. ಬಿಜೆಪಿ ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯ ವೇಗ ಇನ್ನಷ್ಟು ಹೆಚ್ಚಲಿದೆ ಎಂದು ಸಹ ಪಕ್ಷ ಹೇಳಿದೆ. ಹಿರಿಯ ಕಾಂಗ್ರೆಸ್ ನಾಯಕರು ಮತ್ತು ಪಕ್ಷದ ಚುನಾವಣಾ ವೀಕ್ಷಕ ಅಶೋಕ್ ಗೆಹ್ಲೋಟ್, ಮಹಾಮೈತ್ರಿ ಸಂಬಂಧ ಪಾಟ್ನಾದಲ್ಲಿಂದು ಮಾತುಕತೆ ನಡೆಸಿದರು. ಚುನಾವಣಾ ಕಾರ್ಯತಂತ್ರ, ಪ್ರಚಾರ ತಂತ್ರ ಮತ್ತಿತರ ವಿಷಯಗಳ ಬಗ್ಗೆ ಎಲ್ಲಾ ಮೈತ್ರಿ ನಾಯಕರು ನಾಳೆ ತಮ್ಮ ತಮ್ಮ ನಿಲುವು ವ್ಯಕ್ತಪಡಿಸಲಿದ್ದಾರೆ ಎಂದು ಗೆಹ್ಲೋಟ್ ತಿಳಿಸಿದ್ದಾರೆ.

<><><><>

ಯಮುನಾ ನದಿ ಬಳಿ ೧೭ ಮಾದರಿ ಛತ್‌ಘಾಟ್‌ಗಳನ್ನು ದೆಹಲಿ ಸರ್ಕಾರ ನಿರ್ಮಿಸಲಿದೆ ಎಂದು ಮುಖ್ಯಮಂತ್ರಿ ರೇಖಾಗುಪ್ತಾ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಘಾಟ್‌ಗಳಲ್ಲಿ ಟೆಂಟ್‌ಗಳು, ವಿದ್ಯುತ್ ಸೌಲಭ್ಯ, ಶೌಚಾಲಯ ವ್ಯವಸ್ಥೆ ಇರಲಿದೆ ಎಂದರು. ೨೦೨೧ ರಲ್ಲಿ ಯಮುನಾ ನದಿ ತಟದಲ್ಲಿ ಛತ್ ಆಚರಿಸಿದವರ ವಿರುದ್ಧ ಅಂದಿನ ಸರ್ಕಾರ ದಾಖಲು ಮಾಡಿದ್ದ ಎಫ್‌ಐಆರ್‌ಗಳನ್ನು ಹಿಂಪಡೆಯಲಾಗುವುದು ಎಂದೂ ಸಹ ಅವರು ತಿಳಿಸಿದ್ದಾರೆ. ಭಕ್ತರು ಶುದ್ಧವಾದ ನದಿ ನೀರಿನಲ್ಲಿ ನಿಂತು ಪ್ರಾರ್ಥನೆ ಸಲ್ಲಿಸುವಂತಾಗಲು ಈ ಘಾಟ್‌ಗಳಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

<><><><>

ನವದೆಹಲಿಯಲ್ಲಿಂದು ಛಡ್ ರಾಷ್ಟ್ರದ ಭಾರತ ರಾಯಭಾರಿ ಇಲ್ದ್ ಜಿಮಾ ಬಡ್ಡಾ ಅವರನ್ನು ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಭೇಟಿ ಮಾಡಿದರು. ರಕ್ಷಣಾ ತರಬೇತಿ, ಸಾಮರ್ಥ್ಯವೃದ್ಧಿ, ರಕ್ಷಣಾ ಸಾಧನ ಪೂರೈಕೆ ಮತ್ತು ಭಯೋತ್ಪಾದನೆ ನಿಗ್ರಹ ಪ್ರಯತ್ನಗಳ ಬಗ್ಗೆ ಉಭಯ ನಾಯಕರು ಚರ್ಚಿಸಿದರು.

<><><><>

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಜಾವಲಿನ್ ಪಟು ನೀರಜ್ ಚೋಪ್ರಾ ಅವರಿಗೆ ಪ್ರಾಂತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ರ‍್ಯಾಂಕ್‌ನ ಗೌರವ ದೊರೆತಿದೆ. ನವದೆಹಲಿಯಲ್ಲಿಂದು ನಡೆದ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸೇನಾಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಉಪಸ್ಥಿತರಿದ್ದರು. ನೀರಜ್ ಚೋಪ್ರಾ ಅವರು, ಪರಿಶ್ರಮ, ದೇಶಭಕ್ತಿ ಮತ್ತು ಶ್ರೇಷ್ಠತೆಯ ಸಂಕೇತ ಎಂದು ರಕ್ಷಣಾ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಶಿಸ್ತು ಮತ್ತು ಬದ್ಧತೆಯ ಉನ್ನತ ಆದರ್ಶಗಳನ್ನು ಹೊಂದಿರುವ ಚೋಪ್ರಾ ಅವರು, ಮುಂದಿನ ಪೀಳಿಗೆಗೆ ಆದರ್ಶ ಪ್ರಾಯರು ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ.

<><><><>

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಆರ್ಥಿಕ ಮತ್ತು ವ್ಯಾಪಾರ ಪಾಲುದಾರಿಕೆ ಬಲವರ್ಧನೆಗೆ ನಾಳೆಯಿಂದ ಜರ್ಮನಿಗೆ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ. ೨೦೨೫ನೇ ವರ್ಷವು ಭಾರತ-ಜರ್ಮನಿ ಕಾರ್ಯತಂತ್ರ ಪಾಲುದಾರಿಕೆಯ ೨೫ನೇ ವರ್ಷವಾಗಿರುವುದರಿಂದ ಈ ಭೇಟಿ ಮಹತ್ವ ಪಡೆದಿದೆ. ಸಚಿವರು ಜರ್ಮನಿಯ ಆರ್ಥಿಕ ವ್ಯವಹಾರಗಳು ಮತ್ತು ಇಂಧನ ಸಚಿವರೊಂದಿಗೆ ಉನ್ನತಮಟ್ಟದ ದ್ವಿಪಕ್ಷೀಯ ಸಭೆ

ನಡೆಸಲಿದ್ದಾರೆ. ಭಾರತ-ಜರ್ಮನಿ ಆರ್ಥಿಕ ಪಾಲುದಾರಿಕೆ ಬಲವರ್ಧನೆಗೆ ಹಾಗೂ ವ್ಯಾಪಾರ ಮತ್ತು ಹೂಡಿಕೆ ಸಹಕಾರ ಉತ್ತೇಜನದ ಬಗ್ಗೆ ಚರ್ಚೆ ನಡೆಯಲಿದೆ ಎಂದು ವಾಣಜ್ಯ ಸಚಿವಾಲಯ ತಿಳಿಸಿದೆ. ಬರ್ಲಿನ್ ಜಾಗತಿಕ ಸಂವಾದ ಕಾರ್ಯಕ್ರಮದ ಮೂರನೇ ಆವೃತ್ತಿಯಲ್ಲಿ ಗೋಯಲ್ ಅವರು, ಭಾಷಣಕಾರರಾಗಿ ಪಾಲ್ಗೊಳ್ಳಲಿದ್ದಾರೆ. ವಿವಿಧ ಕಂಪನಿಗಳ ಮುಖ್ಯಸ್ಥರೊಂದಿಗೆ ಸರಣಿ ಸಭೆಗಳನ್ನು ನಡೆಸಲಿದ್ದಾರೆ. ಲುಕ್ಸೆಂಬರ್ಗ್‌ನ ಉಪಪ್ರಧಾನಿಯವರೊಂದಿಗೂ ಗೋಯಲ್ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ.

<><><><>

ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯಲ್ಲಿರುವ ಗಂಗೋತ್ರಿ ಧಾಮದ ಬಾಗಿಲುಗಳು ಚಳಿಗಾಲದ ಅನ್ನಕುಟ್ ಉತ್ಸವದ ದಿನವಾದ ಇಂದು ಮುಚ್ಚಲಿವೆ.  ಈ ವರ್ಷ ಭಕ್ತರಿಗೆ ದರ್ಶನಕ್ಕೆ ಇಂದು ತೆರೆ ಬೀಳಲಿರುವ ಹಿನ್ನೆಲೆಯಲ್ಲಿ ದೇಗುಲವನ್ನು ಹೂವುಗಳಿಂದ ವಿಶೇಷವಾಗಿ ಅಲಂಕರಿಸಲಾಗಿದೆ. ದೇಗುಲವನ್ನು ಮುಚ್ಚಿದ ಬಳಿಕ ದೇವಿಗಂಗೆಯ ಮೂರ್ತಿಯನ್ನು ವಿಶೇಷ ಮೆರವಣಿಗೆಯಲ್ಲಿ ಚಳಿಗಾಲದ ಆವಾಸ ಸ್ಥಳವಾದ ಮುಖ್ಬಾ ಗ್ರಾಮಕ್ಕೆ ವಾದ್ಯಗಳೊಂದಿಗೆ ಕರೆದೊಯ್ಯಲಾಗುವುದು.  ಚಳಿಗಾಲದಲ್ಲಿ ಅಲ್ಲಿ ಭಕ್ತರು ದೇವಿಯ ದರ್ಶನ ಪಡೆಯಬಹುದು. ಈ ವರ್ಷ ಸುಮಾರು ೧೪ ಲಕ್ಷ ಯಾತ್ರಿಕರು ಗಂಗೋತ್ರಿ ಮತ್ತು ಯಮುನೋತ್ರಿ ಧಾಮಗಳಿಗೆ ಭೇಟಿ ನೀಡಿದ್ದಾರೆ. ಯಮುನೋತ್ರಿ ಮತ್ತು ಕೇದರಾನಾಥ ಧಾಮಗಳೂ ಕೂಡ ನಾಳೆಯಿಂದ ಮುಚ್ಚಲ್ಪಡಲಿವೆ.

<><><><>

ತಮಿಳುನಾಡಿನ ಬಹುತೇಕ ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ೪೮ ಗಂಟೆಗಳ ಕಾಲ ವ್ಯಾಪಕ ಮಳೆಯಾಗಲಿದೆ ಎಂದು ಪ್ರಾದೇಶಿಕ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.  ಬಂಗಾಳಕೊಲ್ಲಿಯ ನೈಋತ್ಯದಲ್ಲಿನ ಕಡಿಮೆ ಒತ್ತಡದಿಂದಾಗಿ ವಾಯುಭಾರ ಕುಸಿತ ಉಂಟಾಗಲಿದೆ. ಈ ಸಂಬಂಧ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ಕಳೆದ ೨೪ ಗಂಟೆಗಳಲ್ಲಿ ಭಾರೀ ಮಳೆಯಾಗಿದ್ದು, ಮುಂದಿನ ೨೪ ಗಂಟೆಗಳಲ್ಲೂ ಭಾರೀ ಮಳೆ ಮುಂದುವರೆಯಲಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಮುನ್ನೆಚ್ಚರಿಕೆ ನೀಡಲಾಗಿದೆ. ತಗ್ಗು ಪ್ರದೇಶದಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಲಾಗಿದೆ.

<><><><>

ಕಳೆದ ತಿಂಗಳ ಇದೇ ದಿನದಂದು ಆರಂಭವಾದ ಜಿಎಸ್‌ಟಿ ಉಳಿತಾಯ ಉತ್ಸವದಿಂದಾಗಿ ದೇಶಾದ್ಯಂತದ ನಾಗರಿಕರಿಗೆ ಅಪಾರ ಅನುಕೂಲವಾಗಿದೆ. ಜಿಎಸ್‌ಟಿ ದರ ಕಡಿತದಿಂದಾಗಿ ಔಷಧಗಳ ಮೇಲಿನ ಖರ್ಚು ಕಡಿಮೆಯಾಗಿ ಜನರಿಗೆ ಉಳಿತಾಯ ಸಾಧ್ಯವಾಗಿದೆ. ಜಿಎಸ್‌ಟಿ ಸುಧಾರಣೆಯ ಭಾಗವಾಗಿ ಸರ್ಕಾರವು ಕ್ಯಾನ್ಸರ್ ಸೇರಿದಂತೆ ಮಾರಕ ಕಾಯಿಲೆಗಳಿಂದ ೩೬ ಜೀವ ಉಳಿಸುವ ಔಷಧಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡಿದೆ. ಅಗತ್ಯ ಔಷಧಗಳು ಮತ್ತು ವೈದ್ಯಕೀಯ ಸಾಧನಗಳ ಮೇಲಿನ ಜಿಎಸ್‌ಟಿಯನ್ನು ಶೇಕಡ ೧೨ ರಿಂದ ೫ಕ್ಕೆ ಇಳಿಕೆ ಮಾಡಲಾಗಿದೆ. ಇದರಿಂದಾಗಿ ಔಷಧಗಳ ಮೇಲಿನ ವೆಚ್ಚ ಕಡಿಮೆಯಾಗಿದ್ದು, ಜನರು ಉಳಿತಾಯ ಮಾಡಲು ಸಾಧ್ಯವಾಗಿದೆ ಎಂದು ಜನರು ಹರ್ಷ ವ್ಯಕ್ತಪಡಿಸಿದ್ದಾರೆ. ವಿಮೆ ಮೇಲಿನ ತೆರಿಗೆ ಕಡಿತದಿಂದಾಗಿ ವಿಮೆ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ ಎಂದು ದೆಹಲಿ ಆಕಾಶವಾಣಿ ಬಾತ್ಮಿದಾರರು ವರದಿ ಮಾಡಿದ್ದಾರೆ.

<><><><>

ಇಂದೋರ್‌ನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿಂದು ಆಸ್ಟ್ರೇಲಿಯಾ ಎದುರು ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡ  ನಿಗದಿತ ೫೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೨೪೪ ರನ್ ಗಳಿಸಿದೆ. ಈ ಗುರಿ ಬೆನ್ನತ್ತಿರುವ ಆಸ್ಟ್ರೇಲಿಯಾ ತಂಡ ಇತ್ತೀಚಿನ ವರದಿ ಬಂದಾಗ ೯ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೩೮ ರನ್ ಗಳಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>